೨) ನಗರ : ಪಟ್ಟಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬಡಜನರು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವುದನ್ನು ಗಮನಿಸಿ, ಸದರಿ ಪ್ರದೇಶದಲ್ಲಿ ವಾಸಿಸುತ್ತಿರುವ ಕುಟುಂಬಗಳ ಆರ್ಥಿಕ ಸ್ಥಿತಿಗತಿ ಹಾಗೂ ವಾರ್ಷಿಕ ಆದಾಯ ರೂ. 11,850-00ಕ್ಕಿಂತ ಕಡಿಮೆ ಇರುವ ಕುಟುಂಬಗಳಿಗೆ ಹಸಿರು ಪಡಿತರ ಚೀಟಿ ನೀಡಲು ಸರ್ಕಾರದ ಆದೇಶ ಸಂಖ್ಯೆ: ಆಸಾಸ : 06 ಡಿಆರ್‌ಎ : 2000ರ ದಿನಾಂಕ: 1.2.2000ದ ಆದೇಶದಲ್ಲಿ ಸೂಚನೆಗಳನ್ನು ನೀಡಲಾಗಿದೆ. ಅದರಂತೆ ಅರ್ಹ ಬಡ ಕುಟುಂಬಗಳಿಗೆ ಹಸಿರುಪಡಿತರ ಚೀಟಿಯನ್ನು ನೀಡಲಾಗುತ್ತಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಎಸ್.ಎಸ್. ಘಾಟಿ ಮತ್ತು ಮಧುರೈ ಶನಿ ಮಹಾತ್ಮಾ ಸ್ವಾಮಿ ಮುಜರಾಯಿ ದೇವಸ್ಥಾನಗಳಿಂದ ಬರುವ ಆದಾಯ

2372(2826) ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದೊಡ್ಡಬಳ್ಳಾಪುರ ತಾಲ್ಲೂಕಿನ ಎಸ್.ಎಸ್. ಘಾಟಿ ಮತ್ತು ಮಧುರೈ ಶನಿಮಹಾತ್ಮಸ್ವಾಮಿ ದೇವಸ್ಥಾನಗಳಿಂದ ಪ್ರತೀ ವರ್ಷ ಸರ್ಕಾರಕ್ಕೆ ಬರುವ ಆದಾಯವೆಷ್ಟು?

2. ಬರುವ ಆದಾಯವನ್ನು ಯಾವ, ಯಾವ ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಲಾಗುತ್ತಿದೆ?

3. ಇದುವರೆವಿಗೂ ದೇವಸ್ಥಾನದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು ಯಾವುವು?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. ಸದರಿ ದೇವಾಲಯಗಳ ವಾರ್ಷಿಕ ಸರಾಸರಿ ಆದಾಯ ಈ ಕೆಳಕಂಡಂತಿರುತ್ತದೆ.

1) ಶ್ರೀ ಶನಿಮಹಾತ್ಮ ದೇವಸ್ಥಾನ ಮಧುರೈ ರೂ. 13,85,867-00
2) ಶ್ರೀ ಘಾಟಿ ಸುಬ್ರಮಣ್ಯಸ್ವಾಮಿ ದೇವಸ್ಥಾನ, ಘಾಟಿ ರೂ. 39,21,185-00

ಈ ದೇವಾಲಯಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ. ಆದರೆ ಶ್ರೀ ಘಾಟಿ ಸುಬ್ರಮಣ್ಯ ದೇವಾಲಯದ ವಾರ್ಷಿಕ ಆದಾಯದಲ್ಲಿ ಮಾತ್ರ ಶೇಕಡ 12ರಂತೆ ಮುಜರಾಯಿ ಸಿಬ್ಬಂದಿ ವಂತಿಗೆಯಲ್ಲಿ ಇಲಾಖೆಗೆ ಪಡೆಯಲಾಗುತ್ತದೆ. ಮಧುರೈ ಶ್ರೀ ಶನಿಮಹಾತ್ಮ ದೇವಾಲಯದ ಆಡಳಿತದ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ, ವಂತಿಗೆಯನ್ನು ಸಂಗ್ರಹಿಸುವುದಿಲ್ಲ.

2. ಘಾಟಿ ಶ್ರೀ ಸುಬ್ರಹ್ಮಣ್ಯ ದೇವಾಲಯದ ಆದಾಯದಲ್ಲಿ ದೇವಾಲಯದ ನಿರ್ವಹಣೆ ಸಿಬ್ಬಂದಿ ವೇತನ, ಜಾತ್ರಾ ಉತ್ಸವಾದಿಗಳಿಗೆ ಮತ್ತು ಭಕ್ತಾದಿಗಳ ಮೂಲಭೂತ ಸೌಕರ್ಯಕ್ಕಾಗಿ, ಅಭಿವೃದ್ಧಿ ಕಾಮಗಾರಿಗಳಿಗೆ ಹಣವನ್ನು ವಿನಿಯೋಗಿಸಲಾಗುತ್ತದೆ. ಮಧುರೈ

ಶ್ರೀ ಶನಿಮಹಾತ್ಮ ದೇವಾಲಯದ ಆಡಳಿತದ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಸದರಿ ದೇವಾಲಯದ ಆದಾಯವನ್ನು ಸಿಬ್ಬಂದಿ ವೇತನ, ನೀರು ಮತ್ತು ವಿದ್ಯುಚ್ಛಕ್ತಿ, ನಿತ್ಯಕಟ್ಟಿ, ಹೆಚ್ಚುಕಟ್ಟಿ ಬ್ರಹ್ಮರಥೋತ್ಸವಕ್ಕೆ ಮಾತ್ರ ಉಪಯೋಗಿಸಲಾಗುತ್ತದೆ. ಯಾವುದೇ ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸುತ್ತಿಲ್ಲ.

3. ಇದುವರೆವಿಗೂ ಘಾಟಿ ಶ್ರೀ ಸುಬ್ರಹ್ಮಣ್ಯ ದೇವಾಲಯದ ವತಿಯಿಂದ 2000-2001ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ

1)	ಪಾಕಶಾಲೆ ಮತ್ತು ಊಟದ ಮನೆ ನಡುವೆ ಆರ್.ಸಿ.ಸಿ. ಮೇಲ್ಛಾವಣಿ ನಿರ್ಮಾಣ ಮಾಡಿದ್ದು	ರೂ.99,500-00
2)	ದೇವಾಲಯದ ಒಳಾಂಗಣಕ್ಕೆ ಫೈಬರ್ ಶೀಟ್ ಮೇಲ್ಛಾವಣಿ ಅಳವಡಿಸಿದ್ದು	ರೂ. 90,500-00
3)	ದೇವಾಲಯದ ಒಳಾಂಗಣದ ಬಲಭಾಗಕ್ಕೆ ಫೈಬರ್ ಮೇಲ್ಛಾವಣಿ ಅಳವಡಿಸಿದ್ದು	ರೂ. 81,000-00
4)	ಪರಿವೀಕ್ಷಣಾ ಮಂದಿರದ ಪಕ್ಕದಲ್ಲಿ ಉಳಿದ ಕಾಂಪೌಂಡ್ ನಿರ್ಮಾಣ	ರೂ. 50,000-00
5)	ದೇವಾಲಯದ ಆವರಣದಲ್ಲಿರುವ ಪರಿವೀಕ್ಷಣಾ ಮಂದಿರಕ್ಕೆ ನೀರಿನ ಸೌಲಭ್ಯಕ್ಕಾಗಿ ಸಂಪ್ ನಿರ್ಮಾಣ	ರೂ. 60,000-00
	ಒಟ್ಟು	ರೂ. 3,90,000-00

ಹಮ್ಮಿಕೊಂಡಿರುವ ಕಾಮಗಾರಿಗಳು

1)	ಓ.ಎಸ್.ಕೆ.ವಿ. ಜನರೇಟರ್ ಕೊಳ್ಳಲು	ರೂ. 62,000-00
2)	ದೇವಾಲಯದ ಪಂಪಿಗಾಗಿ 12.5 ಕೆ.ವಿ. ಜನರೇಟರನ್ನು ಕೊಳ್ಳಲು	ರೂ. 95,000-00
3)	ಜನರೇಟರ್‌ಗಾಗಿ ಕೊಠಡಿ ನಿರ್ಮಾಣ	ರೂ. 45,000-00
4)	ದೇವಾಲಯದ ಮೇಲ್ಛಾವಣಿ ಸೊರುವಿಕೆ ತಡೆಗಟ್ಟುವ ಬಗ್ಗೆ	ರೂ. 62,000-00
	ಒಟ್ಟು	ರೂ. 2,64,000-00

ಶ್ರೀ ಮಧುಗೈ ಶನಿಮಹಾತ್ಮ ದೇವಾಲಯದ ಆಡಳಿತದ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಉಚ್ಚ ನ್ಯಾಯಾಲಯದ ಅನುಮತಿ ಇಲ್ಲದೆ ದೇವಾಲಯದ ಆದಾಯವನ್ನು ಯಾವುದೇ ಅಭಿವೃದ್ಧಿ ಕಾಮಗಾರಿಗೆ ಬಳಸುವಂತಿಲ್ಲದ ಕಾರಣ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವುದಿಲ್ಲ.

ತುರುವೇಕೆರೆ ತಾಲ್ಲೂಕು ಬೊಮ್ಮೇನಹಳ್ಳಿ ಕೆರೆ ಪಕ್ಕದ ಹೇಮಾವತಿ ಚಾನಲ್‌ಗೆ ತೂಬು ಇಡುವುದರ ಬಗ್ಗೆ

2375(2816) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ತುರುವೇಕೆರೆ ತಾಲ್ಲೂಕು ಬೊಮ್ಮೇನಹಳ್ಳಿ (ಕಸಬಾ) ಕೆರೆ ಇದ್ದು ಇದರ ಪಕ್ಕದಲ್ಲಿ ಹೇಮಾವತಿ ಚಾನಲ್ ಇದ್ದು, ಸದರಿ ಕೆರೆ ಹತ್ತಾರು ವರ್ಷಗಳಿಂದ ಒಣಗುತ್ತಿದ್ದು, ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ಜನರು ಹಾಗೂ ದನಕರುಗಳಿಗೆ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಇಲ್ಲಿ ಯಾವಾಗಲೂ ಹೇಮಾವತಿ ನೀರು ಹರಿಯುವ ಇಲ್ಲಿನ ಚಾನಲ್‌ಗೆ ಒಂದು ತೂಬು ಇದ್ದು ದನಕರುಗಳಿಗೆ ಸರ್ಕಾರ ಸಹಾಯ ಮಾಡುವುದೇ

ಇ) ಈ ವರ್ಷ ಈ ಕೆಲಸ ಮಾಡಿ ಆ ಭಾಗದ ಜನರಿಗೆ ಮತ್ತು ದನಕರುಗಳಿಗೆ ಸರ್ಕಾರ ಸಹಾಯ ಮಾಡುವುದೇ?

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಮಂತ್ರಿಗಳು) :—

ಅ) ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ತುರುವೇಕೆರೆ ತಾಲ್ಲೂಕು, ಬೊಮ್ಮೇನಹಳ್ಳಿ ಕೆರೆಯು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ 8ರ 2ನೇ ಕಿ.ಮೀ.ನಲ್ಲಿನ ನಾಲೆಯ ಎಡಭಾಗದಲ್ಲಿ ಬರುತ್ತಿದೆ. ಸದರಿ ಕೆರೆಯು 1995-96ರಿಂದ ಒಣಗಿರುವ ಬಗ್ಗೆ ವರದಿ ಬಂದಿಲ್ಲ ಹಾಗೂ ಮಳೆಗಾಲದಲ್ಲಿ ತುಂಬುತ್ತಿರುತ್ತದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತುರವೇಕೆರೆ ತಾಲ್ಲೂಕಿನಲ್ಲಿ ಕೆರೆಗಳ ದುರಸ್ತಿ

2376(2817) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.